ಜಾಸ್ತಿ ಮಾಡಿದ್ದೇವೆ. ಅವುಗಳು ಅಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಆದ್ದರಿಂದ ಬೀದರ್ ಜಿಲ್ಲೆಯಲ್ಲಿ ತಾಯಂದಿರ ಡೈರಿಯನ್ನು ಸ್ಥಾಪನೆ ಮಾಡಬೇಕೆಂಬ ಬಗ್ಗೆ ನಾನು ಏನು ಘೋಷಣೆಯನ್ನು ಮಾಡಿದ್ದೇವೆ, ಆದನ್ನು ಮಾಡುತ್ತೇನೆ.

ಶ್ರೀ ಜೆ. ಹೆಚ್. ಮಧುಸ್ವಾಮಿ.—ಡೈರಿ ಸ್ಥಾಪನೆ ಮಾಡುವುದು ಸರ್ಕಾರದ ಅಂತಿಮ ನಿರ್ಧಾರವೇ ಅಥವಾ ಎನ್.ಡಿ.ಡಿ.ಬಿ. ಹಾಗೂ ಕೆ.ಎಂ.ಎಫ್ ನವರನ್ನು ಇದರಲ್ಲಿ ಏನಾದರೂ ಇನ್‌ವಾಲ್ವ್ ಮಾಡುತ್ತೀರಾ? ಆಪ್ರೈಸೆಲ್ ರಿಪೋರ್ಟ್ ಬಗ್ಗೆ ಮಂತ್ರಿಯವರಿಗೆ ಏನಾದರೂ ಗೊತ್ತಿದೆಯೇ ಏಕೆಂದರೆ ಅವರು ಒಂದು ಮಾತನ್ನು ಹೇಳಿದರು, ಅದೇನೆಂದರೆ ಈ ಮಹಿಳೆಯ ಸಹಕಾರ ಸಂಘಗಳನ್ನು ಆರಂಭ ಮಾಡುವುದಕ್ಕೆ ನಾವು ಹೊರಟ್ಟಿದ್ದೇವೆಂದು. ಆದರೆ ಇದು ನಾಲ್ಕೈದು ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಈ ವರ್ಷ ಇದು ಆರಂಭವಾಗುತ್ತದೆಯೇ ಎಂದು ಕೇಳುತ್ತೇನೆ ?

ಶ್ರೀ ಬಿ. ಬಸವಲಿಂಗಪ್ಪ,—ನಾನು ಸದಸ್ಯರು ಕೆ. ಎಂ. ಎಫ್ ನ ಅಧ್ಯಕ್ಷರು ಇದ್ದಾರೆ. ಅವರಿಗೆ ಎಲ್ಲಾ ಗೊತ್ತಿದೆ. ಅವರು ನನ್ನ ಗೆಳೆಯರು, ಕೆ.ಎಂ.ಎಫ್. ಒಂದು ಸಂಸ್ಥೆ ಇದೆಯೆಂದು ಅವರು ಹೇಳಿದರು. ಯೂನಿಯನ್ ಮಾಡಿದ್ದೇವೆ ಅದು ನನಗೆ ಗೊತ್ತಿದೆ. ಸಹಕಾರ ಸಂಘಗಳು ತಾಯಂದಿರ ಸಂಸ್ಥೆಗಳು. ಇದಕ್ಕೆ ನಾವು ಹೆಚ್ಚಿನ ರೂಪದಲ್ಲಿ ಸಹಾಯ ಮಾಡಿ ಪ್ರತಿಜಿಲ್ಲೆಯಲ್ಲಿ, ಪತ್ರಿ ತಾಲ್ಲೂಕಿನಲ್ಲಿ ಇಂತಹ ವ್ಯವಸ್ಥೆ ಮಾಡಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ ಕೆ.ಎಂ ಎಫ್.ನ ಅಧ್ಯಕ್ಷರು ಈ ಬಗ್ಗೆ ಬಹಳ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಹೇಗೆ ಬೀದರ್ ಜಿಲ್ಲೆಯಲ್ಲಿಯೂ ಮಾಡಲಿಕ್ಕೆ ಸಾಧ್ಯವಾಗುತ್ತೆ ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೈದ್ಯಾಧಿಕಾರಿಗಳ ನೇಮಕ

೧೩೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು, ಹಾಗೂ ಯಾವ ಯಾವ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇವೆ, ಹಾಗೂ ಈ ಹುದ್ದೆಗಳು ಎಂದಿನಿಂದ ಖಾಲಿ ಇರುತ್ತವೆ ?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ೪೦ ಹುದ್ದೆಗಳು ಖಾಲಿ ಇವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆದಷ್ಟು ಬೇಗನೆ ಕೆಲವು ಸ್ಥಾನಗಳನ್ನು ತುಂಬಲಾಗುವುದು.

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯ ವಿವರಗಳು

			ಖಾಲಿ ಇರುವ ದಿನಾಂಕ
೧)	ಸಹಾಯಕ ಜಿಲ್ಲಾ ಆ.ಕು.ಕ. ಅಧಿಕಾರಿ—೩	ಅ) ಕುಂದಾಪುರ ಉಪ ವಿಭಾಗ	೬-೨-೧೯೮೮
		ಆ) ಪುತ್ತೂರು ,,	೧೪-೬-೧೯೮೯
		ಇ) ಮಂಗಳೂರು ,,	೧-೨-೧೯೮೯
೨)	ಉಪ ಶಸ್ತ್ರ ಚಿಕಿತ್ಸಕರು—೨	ಅ) ಪಿ.ಪಿ.ಸಿ. ಕುಂದಾಪುರ	೧೨-೧೧-೧೯೮೧
		ಆ) ಸಾರ್ವಜನಿಕ ಆಸ್ಪತ್ರೆ, ಪುತ್ತೂರು	೧೯-೬-೧೯೮೪

೩) ಆರೋಗ್ಯ ಅಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರು — ೨೩

			ಹುದ್ದೆಯ ಸಂಖ್ಯೆ	ಖಾಲಿ ಇರುವ ದಿನಾಂಕ
೧)	ಪ್ರಾ.ಆ.ಕೇಂದ್ರ,	ಸುರತ್ಕಲ್ (ಮ.ವೈ)	೧	೧೧-೭-೧೯೮೮
೨)	,,	ಬಜ್ಪೆ (ಮ.ವೈ.)	೧	೪-೭-೧೯೮೮
೩)	,,	ವಿಟ್ಲ	೧	೧೬-೨-೧೯೮೯
೪)	,,	ಕಡಬ (ಮ.ವೈ.)	೧	೧೦-೧-೧೯೮೯
೫)	ಸಮುದಾಯ ಆರೋಗ್ಯ ಕೇಂದ್ರ,	ಮುಲ್ಕಿ	೧	೨೭-೯-೧೯೮೮
೬)	ಪ್ರಾ.ಆ.ಕೇಂದ್ರ,	ಬೆಂಜನಪದವು	೧	೨೬-೬-೧೯೮೩
೭)	,,	ಸಿದ್ಧಾಪುರ	೧	೨೨-೮-೧೯೮೯
೮)	,,	ಪುಂಜಾಲಕಟ್ಟೆ (ಮ.ವೈ.)	೧	೪-೬-೧೯೮೭
೯)	,,	ಗಂಗೊಳ್ಳಿ	೧	೬-೧೦-೧೯೮೪
೧೦)	,,	ಆವರಸೆ	೧	೨೨-೮-೧೯೮೯
೧೧)	ಪಿ.ಪಿ.ಸಿ.	ಕುಂದಾಪುರ	೧	೨೬-೭-೧೯೮೯
೧೨)	ಸಾರ್ವಜನಿಕ ಆಸ್ಪತ್ರೆ.	ಕುಂದಾಪುರ	೧	೧೦-೮-೧೯೮೯
೧೩)	ಪ್ರಾ.ಆ.ಕೇಂದ್ರ,	ಬೈಂದೂರು (ಮ.ವೈ)	೧	೨೪-೨-೧೯೮೯
೧೪)	,,	ಬಿಡಕಲ್ ಕಟ್ಟೆ (ಮ.ವೈ)	೧	೧೯-೧೦-೧೯೮೯
೧೫)	ಎಂ.ಟಿ.ಹೆಚ್.ಯು.	ಪೆರಡೂರು	೧	೫-೧-೧೯೯೦
೧೬)	ಪ್ರಾ.ಆ.ಕೇಂದ್ರ,	ಇರವತ್ತೂರು	೧	೩೧-೮-೧೯೮೯
೧೭)	,,	ಪಡುಬಿದ್ರಿ	೧	೩-೮-೧೯೮೯
೧೮)	ಪ್ರಾ.ಆ.ಘಟಕ	ಇನ್ನಾ	೧	೫-೧೨-೧೯೮೯
೧೯)	ಜನರಲ್ ಆಸ್ಪತ್ರೆ,	ಕಾರ್ಕಳ (ಮ.ವೈ.)	೧	೫-೧೨-೧೯೮೯
೨೦)	ಪ್ರಾ.ಆ.ಕೇಂದ್ರ,	ಮೂಡಬಿದ್ರಿ (ಮ.ವೈ.)	೧	೧೮-೬-೧೯೮೯
೨೧)	ಎನ್.ಎಲ್.ಸಿ.ಯು.	ಪುತ್ತೂರು	೧	೩೧-೫-೧೯೮೯
೨೨)	ಪ್ರಾ.ಆ.ಕೇಂದ್ರ,	ವೇಣೂರು	೧	೧-೮-೧೯೮೯
೨೩)	ಲೇಡಿ ಗೋಷನ್ ಆಸ್ಪತ್ರೆ,	ಮಂಗಳೂರು	೧	೧-೧೧-೧೯೮೯

೪) ಸಹಾಯಕ ದಂತ ವೈದ್ಯರು — ೫

೧)	ಸಾರ್ವಜನಿಕ ಆಸ್ಪತ್ರೆ,	ಪುತ್ತೂರು	೧	೪-೧೦-೧೯೮೩
೨)	ಪ್ರಾ.ಆ.ಕೇಂದ್ರ,	ಬೆಳ್ತಂಗಡಿ	೧	೧೭-೩-೧೯೮೬
೩)	ಜನರಲ್ ಆಸ್ಪತ್ರೆ,	ಮೂಡಬಿದ್ರಿ	೧	೩-೧೧-೧೯೮೫
೪)	ಜನರಲ್ ಆಸ್ಪತ್ರೆ	ಕಾರ್ಕಳ	೧	೧೦-೬-೧೯೮೯
೫)	ಸಮುದಾಯ ಆರೋಗ್ಯ ಕೇಂದ್ರ,	ಮುಲ್ಕಿ	೧	೨೭-೯-೧೯೮೮

೫) ವೈದ್ಯಾಧಿಕಾರಿಗಳು (ದರ್ಜೆ—೩) — ೭

೧)	ಪ್ರಾ.ಆ.ಘಟಕ,	ಆಲದಂಗಡಿ	೧	೬-೧೦-೧೯೮೫
೨)	,,	ಪಾಂಜಾ	೧	೬-೧೦-೧೯೮೩
೩)	,,	ಕೊಯಿಲಾ	೧	೧೦-೨-೧೯೮೪
೪)	,,	ಹಕ್ಲಾಡಿ	೧	
೫)	,,	ಮುಂಡಜೆ	೧	
೬)	,,	ಹಿರೇಬೆಟ್ಟು	೧	
೭)	,,	ಬೈಲೂರು	೧	

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ನಮ್ಮ ತಾಲ್ಲೂಕಿನಲ್ಲಿ ೧೦ ಹುದ್ದೆಗಳು ಖಾಲಿ ಇವೆ. ಕುಂದಾಪುರ ಹಾಗೂ ಬೈಂದೂರ್‌ನಲ್ಲಿ ೧೦ ಹುದ್ದೆಗಳು ಖಾಲಿ ಇವೆ. ಈ ದೃಷ್ಟಿಯಿಂದ ಸಹ ನಮ್ಮ ತಾಲ್ಲೂಕು ಬಹಳ ಅಲಕ್ಷ್ಯವಾಗಿದೆ. ಇದನ್ನು ತುಂಬುವ ಬಗ್ಗೆ ಏನು ಪ್ರಯತ್ನ ಮಾಡುತ್ತೀರಿ ? ಎರಡನೆಯದಾಗಿ, ಹೆಚ್ಚುವರಿ ವೈದ್ಯಾಧಿಕಾರಿಗಳು ಇರುವ ಕಡೆಯಿಂದ ಅಲ್ಲಿಂದ ಇಲ್ಲಿಗೆ ವರ್ಗಾವಣೆ ಮಾಡಿ, ಒಂದು ಸಮಾನ ರೀತಿಯಲ್ಲಿ ಹಂಚಿಕೆ ಮಾಡುವುದಕ್ಕೆ ಸರ್ಕಾರ ಏನಾದರೂ ಆಲೋಚನೆ ಮಾಡುತ್ತಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ ಹಾಗೆ ಕೆಲವು ವೈದ್ಯರುಗಳು ಪಿ. ಜಿ. ಕೋರ್ಸಿಗೆ ಹೋಗಿರುವುದರಿಂದ ಅಂತ ಹುದ್ದೆಗಳು ಖಾಲಿ ಇವೆ. ಖಾಲಿಯಿರುವ ಕೆಲವನ್ನು ನಾವು ಸಾಮಾನ್ಯ ವರ್ಗಾವಣೆಯ ಸಮಯದಲ್ಲಿ ತುಂಬುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.— ಪಿ. ಜಿ. ಕೋರ್ಸಿಗೆ ಹೋದ ಸಂದರ್ಭದಲ್ಲಿ ಸಹ ಆ ಸ್ಥಾನವನ್ನು ತುಂಬುವುದು ಸರ್ಕಾರದ ಕರ್ತವ್ಯ. ಇದರಿಂದ ಲೋಪವಾಗಿದೆ. ಆದ್ದರಿಂದ ಸಾಮಾನ್ಯವಾಗಿ ಹೆಚ್ಚುವರಿ ವೈದ್ಯಾಧಿಕಾರಿಗಳು ಎಲ್ಲಿದ್ದಾರೆ, ಅವರನ್ನು ತೆಗೆದು ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಕೂಡಲೇ ಹಾಕಬೇಕು ಏತಕ್ಕೆಂದರೇ ಇಡೀ ಆಸ್ಪತ್ರೆಯನ್ನು ಖಾಲಿ ಇಡುವುದಕ್ಕಿಂತ ಕೆಲವು ವೈದ್ಯಾಧಿಕಾರಿಗಳನ್ನಾದರೂ ಅಂತಹ ಜಾಗಗಳಲ್ಲಿ ತುಂಬಿಸುವುದು ಸರ್ಕಾರದ ಕರ್ತವ್ಯ. ಇದು ಸಾಮಾನ್ಯ ವರ್ಗಾವಣೆಯ ಮುಂಚಿಯೇ ಆಗಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಸಾಮಾನ್ಯ ವರ್ಗಾವಣೆ ಏಪ್ರಿಲ್ ತಿಂಗಳಿನಲ್ಲಿ ಆಗುತ್ತದೆ. ಆಗ ಮಾಡುತ್ತೇವೆ.

ರಾಜ್ಯದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳು

೬೮. ಶ್ರೀ ಜಿ. ರಾಜುಗೌಡ (ಹೆನೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಎಷ್ಟು ಕಾರ್ಖಾನೆಗಳು ಲಾಭದಾಯಕವಾಗಿ ನಡೆಯುತ್ತಿವೆ ?

ಇ) ನಷ್ಟವನ್ನು ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಲಾಭದಾಯಕವಾಗಿ ನಡೆಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಅ) ೧೬

ಆ) ೧೨

ಇ) ಸಹಕಾರ ಸಕ್ಕರೆ ಕಾರ್ಖಾನೆಗಳು ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಸಾಲ ಹಾಗೂ ಬಡ್ಡಿಯ ಮರುಪಾವತಿಯ ರೀಷಡ್ಯೂಲ್ ಮಾಡಲು ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚನೆ, ಸರ್ಕಾರದಿಂದ ಸಾಲ ನೀಡಿಕೆ, ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು ಪಡೆಯುವ ಸಾಲಕ್ಕೆ ಖಾತರಿ ನಿಲ್ಲುವಿಕೆ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

ಶ್ರೀ ಜಿ. ರಾಜುಗೌಡ.— ೧೯೮೮-೮೯ನೇ ಸಾಲಿನಲ್ಲಿ ೧೬ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಯಾವ ಯಾವ ಕಾರ್ಖಾನೆಗಳು ಎಷ್ಟೆಷ್ಟು ಲಾಭವನ್ನು ಗಳಿಸಿವೆ ? ಮತ್ತು ಯಾವ ಯಾವ ಕಾರ್ಖಾನೆಗಳು ನಷ್ಟವನ್ನು ಹೊಂದಿವೆ ? ಈ ೧೬ ಸಕ್ಕರೆ ಕಾರ್ಖಾನೆಗಳಲ್ಲಿ ಅತಿ ಹೆಚ್ಚಿನ ಲಾಭವನ್ನು ಗಳಿಸಿರತಕ್ಕ ಕಾರ್ಖಾನೆಗಳು ಯಾವುವು ಮತ್ತು ಒಂದು ಟನ್ ಕಬ್ಬು ಅರೆಯುವುದಕ್ಕೆ ತಗಲುವ ವೆಚ್ಚ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.— ಇಷ್ಟೊಂದು ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರೆ ಹೇಗೆ ? ಅದೂ ಬಹಳ ದೊಡ್ಡ ಪ್ರಶ್ನೆಗಳು.